# ಮೆಟಾ ವೆರಿಫೈಡ್




## ಫೇಸ್‌ಬುಕ್, ಇನ್‌ಸ್ಟಾಗ್ರಾಂಗೂ ಕಾಲಿಟ್ಟ ಶುಲ್ಕದ ಹೊರೆ

**ಬ್ಲೂಟಿಕ್‌ಗೆ ಶುಲ್ಕ ವಿಧಿಸಿ ಸುದ್ದಿಯಾಗಿದ್ದ ಟ್ವಿಟರ್‌ನಂತೆ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಒಡೆತನದ ಮೆಟಾ ಕೂಡ ಈಗ ಅದೇ ವಿಚಾರಕ್ಕೆ ಸದ್ದಿನಲ್ಲಿದೆ.**

**■ ಶಶಿಕುಮಾರ್ ಸಿ.**

ತನ್ನ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ನ ‘ಬ್ಲೂಟಿಕ್’ ಆಯ್ಕೆಗೆ ‘ಮೆಟಾ’ ಕಂಪನಿ ಶುಲ್ಕವಿಧಿಸುತ್ತಿದೆ. ಜಗತ್ತಿನ ಅತ್ಯಂತ ಪ್ರಭಾವಿ ಸಾಮಾಜಿಕ ಜಾಲತಾಣಗಳಾದ ಮೆಟಾದ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಖಾತೆಗಳಿಗೆ ಹಣ ಪಾವತಿಸಿ ‘ಬ್ಲೂ ಟಿಕ್’ (ಮೆಟಾ ವೆರಿಫೈಡ್) ಆಯ್ಕೆ ಪಡೆಯುವ ಮಾಸಿಕ ಚಂದಾದಾರಿಕೆ ಯೋಜನೆಯನ್ನು ಕಂಪನಿಯು ಭಾರತದಲ್ಲಿ ಆರಂಭಿಸುವುದಾಗಿ ಹೇಳಿದೆ.

ಮೆಟಾ ವೆರಿಫೈಡ್ ಆಯ್ಕೆಗೆ ಶುಲ್ಕ ವಿಧಿಸಲು ಮುಂದಾಗಿರುವ ಮೆಟಾದ ಈ ಕ್ರಮವು ಟ್ವಿಟರ್‌ನ ಅನುಕರಣೆಯಂತಿದ್ದು, ಟ್ವಿಟರ್ ಸಹ ಕೆಲ ತಿಂಗಳ ಹಿಂದೆಯಷ್ಟೇ ಬ್ಲೂಟಿಕ್ ಬಳಕೆಗೆ ಮಾಸಿಕ ಚಂದಾದಾರಿಕೆ ಯೋಜನೆ ಪ್ರಾರಂಭಿಸಿದೆ. ‘ಮೊಬೈಲ್ ಬಳಕೆದಾರರಿಗೆ ಮಾಸಿಕ ₹1099 ಮತ್ತು ವೆಬ್ ಬಳಕೆದಾರರಿಗೆ ಮಾಸಿಕ ₹1450 ಶುಲ್ಕವನ್ನು ಭಾರತದಲ್ಲಿ ವಿಧಿಸುವ ಸಾಧ್ಯತೆ ಇದೆ’ ಎಂದು ಈ ಹಿಂದೆಯೇ ಹೇಳಲಾಗಿತ್ತು. ಆದರೆ, ಸದ್ಯ ಶುಲ್ಕ ನಿಗದಿ ವಿಚಾರದಲ್ಲಿ ಮೆಟಾ ಕೊಂಚ ಪರಿಷ್ಕರಣೆ ಮಾಡಿದೆ.

ಶುಲ್ಕ ಪರಿಷ್ಕರಣೆ ನಂತರದಲ್ಲಿ ನೋಡುವುದಾದರೆ, ‘ಮೆಟಾ ವೆರಿಫೈಡ್’ ಪಡೆಯಲು ಮೊಬೈಲ್ ಬಳಕೆದಾರರು ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಸೇರಿದಂತೆ ಎರಡಕ್ಕೂ ಮಾಸಿಕವಾಗಿ ₹1450 ಪಾವತಿಸಬೇಕಾಗಿದೆ. ವೆಬ್ ಬಳಕೆದಾರರು ಮಾಸಿಕವಾಗಿ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಎರಡಕ್ಕೂ ₹1099 ಪಾವತಿಸಬೇಕಾಗಿದೆ. ಜಾಗತಿಕ ಮಟ್ಟಕ್ಕೆ ಹೋಲಿಕೆ ಮಾಡಿದರೆ ದೇಶದಲ್ಲೇ ಈ ಬೆಲೆ ಕೊಂಚ ದುಬಾರಿ ಎನಿಸುತ್ತದೆ. ಜಾಗತಿಕ ವೆಬ್ ಬಳಕೆದಾರರಿಗೆ ಮಾಸಿಕ ₹900 ಮತ್ತು ಮೊಬೈಲ್ ಬಳಕೆದಾರರಿಗೆ ಮಾಸಿಕ ₹1200 ನಿಗದಿಪಡಿಸಲಾಗಿದೆ.

ಮೆಟಾ ವೆರಿಫೈಡ್ ಸೇವೆಯು ಪ್ರಸ್ತುತ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಚಾಲ್ತಿಯಲ್ಲಿದೆ. ಇದೀಗ ಭಾರತದಲ್ಲೂ ಈ ಸೇವೆ ಪಡೆಯುವ ಕಾಲ ಸನ್ನಿಹಿತಗೊಂಡಿದೆ. ಅದಕ್ಕಾಗಿ ಕಾಯುವಿಕೆ ಪಟ್ಟಿಗೆ (waitlist) ಹೆಸರು ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮೆಟಾ ಈಗಾಗಲೇ ಚಾಲನೆ ನೀಡಿದೆ.

ಉದ್ಯೋಗ ಕಡಿತದ ವಿಚಾರವಾಗಿಯೇ ಸುದ್ದಿಯಲ್ಲಿದ್ದ ಮೆಟಾದ ಸಿಇಒ ಮಾರ್ಕ್ ಜುಕರ್‌ಬರ್ಗ್, ‘ಈ ಹೊಸ ಫೀಚರ್‌ನೊಂದಿಗೆ ನಮ್ಮ ಸೇವೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರೆಸುತ್ತಿದ್ದೇವೆ. ಜೊತೆಗೆ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುತ್ತೇವೆ’ ಎಂದು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಈಗಾಗಲೇ ‘ಬ್ಲೂ ಟಿಕ್’ ಪಡೆದುಕೊಂಡಿರುವವರಿಗೆ ಮೆಟಾದ ಹೊಸ ಯೋಜನೆ ಅಷ್ಟಾಗಿ ಬಾಧಿಸದು. ಗಣ್ಯ ವ್ಯಕ್ತಿಗಳು ಅಲ್ಲದಿದ್ದರೂ ಸಂಪಾದನೆಯ ದೃಷ್ಟಿಯಿಂದ ಅಥವಾ ಉದ್ದೇಶದಿಂದ ಖಾತೆ ಹೊಂದಿರುವ ಬಳಕೆದಾರರಿಗೂ ಮೆಟಾ ವೆರಿಫೈಡ್ ಯೋಜನೆ ಅನ್ವಯಿಸುತ್ತದೆ. ಹೀಗಾಗಿ, ಯಾರು ಬೇಕಾದರೂ ಹಣ ಪಾವತಿಸಿ ಈ ಸೇವೆ ಪಡೆಯಬಹುದು. ಸದ್ಯದ ಮಟ್ಟಿಗೆ ಈ ಸೇವೆಯು ವ್ಯಾಪಾರ ಸಂಸ್ಥೆಯ ಖಾತೆಗಳಿಗೆ ಮತ್ತು ಅಪ್ರಾಪ್ತರಿಗೆ ಲಭ್ಯವಾಗುವುದಿಲ್ಲ. ■

### ಮೆಟಾ ವೆರಿಫೈಡ್ ಜೊತೆಗೆ...

- ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆದಾರರು ನೀವೇ ಎನ್ನುವುದನ್ನು ವೆರಿಫೈಡ್ ಬ್ಯಾಡ್ಜ್ ಖಾತರಿಪಡಿಸುತ್ತದೆ. ಜೊತೆಗೆ ನಿಮ್ಮ ಖಾತೆಯ ಅಧಿಕೃತತೆಯನ್ನು ಸರ್ಕಾರಿ ಗುರುತಿನ ಚೀಟಿಯೊಂದಿಗೆ ಹಾಗೂ ಸೆಲ್ಫಿ ವಿಡಿಯೊದೊಂದಿಗೆ ಖಚಿತಪಡಿಸುತ್ತದೆ.
- ಅಕೌಂಟ್ ಮಾನಿಟರಿಂಗ್ ಮಾಡುವ ವಿಚಾರದಲ್ಲಿ ಮೆಟಾ ಸುರಕ್ಷತೆಗೆ ಆದ್ಯತೆ ನೀಡಿದೆ.
- ಸೋಷಿಯಲ್ ಮೀಡಿಯಾದಲ್ಲಿ ಹೆಚ್ಚು ಫಾಲೋವರ್ಸ್ ಹಾಗೂ ಅಭಿಮಾನಿಗಳನ್ನು ಹೊಂದಿರುವವರ ಖಾತೆಗಳಿಗೆ ಇನ್ನಷ್ಟು ಸುರಕ್ಷಿತ ಕ್ರಮ ಕೈಗೊಳ್ಳುವುದು.
- ಅಕೌಂಟ್‌ಗೆ ಲಾಗಿನ್ ಆಗುವ ವೇಳೆ ಎದುರಾಗುವ ಕೆಲ ಸಾಮಾನ್ಯ ಸಮಸ್ಯೆಗಳಿಗೆ ಅಗತ್ಯ ನೆರವು ಕಲ್ಪಿಸುವುದು.
- ಹುಡುಕಾಟ, ಕಾಮೆಂಟ್‌ಗಳು ಮತ್ತು ಶಿಫಾರಸುಗಳಂತಹ ಕೆಲ ವಿಭಾಗಗಳಲ್ಲಿ ಪ್ರಾಮುಖ್ಯತೆಯ ಆಧಾರದಲ್ಲಿ ಹೆಚ್ಚಿನ ವಿಸಿಬಲಿಟಿ ಕಲ್ಪಿಸುವುದು.